# ಮೈಸೂರು ಶಿಲ್ಪಿ
MYSURU SHILPI

BUILDERS' ASSOCIATION OF INDIA
MYSURU CENTRE

BOND TO BUILD

| ಅಧ್ಯಕ್ಷರು | ಗೌ. ಕಾರ್ಯದರ್ಶಿ | ಸಂಪಾದಕರು |
|---|---|---|
| ದಿನೇಶ್ ಬಿ.ಎಸ್. | ರಘುನಾಥ್ ಆರ್. | ವಿ. ಗುರುದತ್ ಮತ್ತು ರಮಾದೇವಿ ಶ್ರೀಕಾಂತ್ |

ಸಂಪುಟ : ೨೪ ನವೆಂಬರ್ ೨೦೧೯ ಸಂಚಿಕೆ : ೦೮


## ಅನಿಕೇತನ

### ಕನ್ನಡ ರಾಜ್ಯೋತ್ಸವ ಸಮಾರಂಭ





ಸಾವಿರದ ಒಂಬೈನೂರ ಐವತ್ತಾರು (೧೯೫೬) ನವೆಂಬರ್ ೧ ರಂದು ಕರ್ನಾಟಕ ಏಕೀಕರಣವಾಯಿತು. ಅಂದರೆ ಅದಕ್ಕಿಂತ ಮೊದಲು ಮೈಸೂರು ಸಂಸ್ಥಾನ, ಹೈದರಾಬಾದ್ ಕರ್ನಾಟಕ, ಮುಂಬೈ ಕರ್ನಾಟಕ ಮತ್ತು ಮದ್ರಾಸ್ ಕರ್ನಾಟಕ ಎಂದು ನಾಲ್ಕು ಭಾಗಗಳಾಗಿತ್ತು. ಆ ದಿನ ರಾಜಕೀಯವಾಗಿ ಒಂದಾಗಿದ್ದ ಕರ್ನಾಟಕ, ರಾಜ್ಯೋತ್ಸವ ಅಥವಾ ಕನ್ನಡ ರಾಜ್ಯೋತ್ಸವವೆಂದೇ ಆಚರಿಸಲಾಗುತ್ತಿದೆ. ಆದರೆ ನಮ್ಮ ಕನ್ನಡ ಅಭಿಮಾನಕ್ಕಾಗಿ ನವೆಂಬರ್ ತಿಂಗಳು ಪೂರ್ತಾ ಕನ್ನಡ ರಾಜ್ಯೋತ್ಸವ ಆಚರಿಸುತ್ತೇವೆ.

ನಮ್ಮ ಹೆಮ್ಮೆಯ ಸಂಸ್ಥೆಯಾದ ಬಿಎಐ, ಮೈಸೂರು ಕೇಂದ್ರ ನವೆಂಬರ್ ೧೫ರಂದು ನಮ್ಮದೇ ಅಭಿಮಾನದ ಕಟ್ಟಡ ಎಂ.ಬಿ.ಸಿ.ಟಿ.ಯಲ್ಲಿ ವಿಭಿನ್ನ ಶೈಲಿಯಲ್ಲಿ ವಿನೂತನವಾಗಿ ಆಚರಿಸಲಾಯಿತು.

ಅಂದು ಎಂ.ಬಿ.ಸಿ.ಟಿ ಮ್ಯಾನೇಜಿಂಗ್ ಟ್ರಸ್ಟಿ ಶ್ರೀ ಎಸ್.ಆರ್. ಸ್ವಾಮಿ, ಬಿಎಐ ರಾಷ್ಟ್ರೀಯ ಉಪಾಧ್ಯಕ್ಷರಾದ ಶ್ರೀ ಕೆ. ಶ್ರೀರಾಮ್‌ರವರು ದೀಪ ಬೆಳಗಿಸಿದರು. ಅವರೊಂದಿಗೆ ಬಿಎಐ ಅಧ್ಯಕ್ಷರಾದ ಶ್ರೀ ಬಿ.ಎಸ್. ದಿನೇಶ್, ಗೌರವ ಕಾರ್ಯದರ್ಶಿ ಶ್ರೀ ರಘುನಾಥ್, ಸ್ಫೂರ್ತಿ ಅಧ್ಯಕ್ಷರಾದ ಶ್ರೀಮತಿ ಅನಿತಾ ಶ್ರೀಧರ್ ಮತ್ತು ಜಾನಪದ ಲೋಕದ ಕೊಂಡಿ ಎಂದೇ ಬಿಂಬಿತರಾದ ಶ್ರೀ ಜನಾರ್ದನ್ (ಜನ್ನಿ) ರವರು ಕೈಗೂಡಿಸಿದ್ದು ಕಣ್ತುಂಬಿತ್ತು.

ಅದೇ ವೇಳೆಯಲ್ಲಿ ಜನಾರ್ದನ್ ತಂಡದವರಿಂದ ಡಿ.ಎಸ್. ಕರ್ಕಿರವರ ಜನಪ್ರಿಯ ಕವಿತೆ "ಹಚ್ಚೇವು ಕನ್ನಡದ ದೀಪ" ಹಾಡು ಮೈನವರೇಳಿಸುವಂತ್ತಿತ್ತು.

'ಅನಿಕೇತನ' ಎಂದೇ ಹೆಸರಿಸಲ್ಪಟ್ಟ ಬಿ.ಎ.ಐ.ನ ಅಧ್ಯಕ್ಷರಾದ





Poonam Ply N Wud Planet
Dheeraj Patel 99800 25127
# 3/4C, Hunsur Road, Hinkal, Mysore - 570 017

SURABHI STEELS
No. 43/E, Akkamahadevi Road
Industrial Suburb, 2nd Stage
Mysore South, Mysore 570 008
Ph.: 2487846, 98455-58160

Solar Associates
TUBE INVESTMENTS OF INDIA LTD.
#861/1, Opp. Sri Lakshmi Venkateshwara Temple,
Mission Hospital Road, Mysore - 01.
Ph : 0821-2440040, 2417612. Fax : 0821-4190295



ಶ್ರೀ ಬಿ.ಎಸ್. ದಿನೇಶ್‌ರವರು ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಶೈಲಿ, ಪದಬಳಕೆ, ನಿರರ್ಗಳವಾಗಿ ವ್ಯಾಖ್ಯಾನಿಸಿದ್ದು ಕಿವಿಗೆ ಬಹಳ ಇಂಪಾಗಿತ್ತು.

ನಮ್ಮ ಸಂಭ್ರಮಕ್ಕೆ ಇಂಬುಕೊಟ್ಟಂತೆ, ರಂಗಾಯಣದ ಮಾಜಿ ಅಧ್ಯಕ್ಷರಾದ ಜನಾರ್ಧನ ಮತ್ತು ತಂಡದವರು ನಡೆಸಿಕೊಟ್ಟ ಕಾರ್ಯಕ್ರಮ ಅದ್ಭುತ. ಅದರಲ್ಲೂ ದಯಾನಂದ್‌ರವರು ಹಾಡಿದ ಜನಪ್ರಿಯ ಜಾನಪದ ಗೀತೆ ನಂಜುಂಡೇಶ್ವರ ಮತ್ತು ಚಾಮುಂಡೇಶ್ವರಿ ಕಥೆ ಕೇಳಲು ಸೊಗಸಾಗಿತ್ತು.

ಸಾಮಾನ್ಯವಾಗಿ ಲಿಖಿತ ಪುರಾಣ ಗ್ರಂಥಗಳಲ್ಲಿ ದೇವರುಗಳನ್ನು





ಅಸಾಧಾರಣ, ಅನಂತ, ಅಸಮಾನ್ಯ ಎಂದೇ ಬಿಂಬಿಸಲಾಗುತ್ತಿದೆ. ಆದರೆ ಅಲಿಖಿತ ಪುರಾಣ ಜಾನಪದ ಗ್ರಂಥಗಳಲ್ಲಿ ದೇವರುಗಳನ್ನು ಸಾಮಾನ್ಯರಂತೆ ನಮ್ಮ ನಿಮ್ಮಂತೆ ಭಾವಿಸಿ ಬಿಂಬಿಸಲಾಗುತ್ತಿದೆ. ಉದಾ.:– ಚಾಮುಂಡೇಶ್ವರಿ ನಂಜುಂಡೇಶ್ವರನಿಗೆ ಶಾಪ ಕೊಡುವ ರೀತಿ 'ಇವರಿಗೆ



ಹಾವಾದ್ರೂ ಕಚ್ಚಾಬಾರ್ದ ಚೇಳಾದ್ರು ಕುಟುಕಬಾರ್ದ' ಹೀಗೆ.

ಜನಾರ್ದನ್‌ರವರ ಎಲ್ಲೋ ಜೋಗಪ್ಪ ನಿನ್ನ ಅರಮನೆ, ನಿತಿನ್ ರಾಜಾರಾಮಶಾಸ್ತ್ರಿಯವರು ಹಾಡಿದ ಮೈಸೂರು ಅನಂತಸ್ವಾಮಿ ಹಾಡುಗಳು ಹಾಗೂ ಶ್ರೀಮತಿ ರಶ್ಮಿಯವರು ಪ್ರಸಿದ್ಧ ಕವಿಗಳ ಕವಿತೆಗಳನ್ನು ಹಾಡಿದ್ದು ಸೊಗಸಾಗಿತ್ತು.

ಜೊತೆಗೆ ಶ್ರೀಮತಿ ಶಾಂತಿ ಭಾರದ್ವಾಜ್‌ರವರು ನಡೆಸಿಕೊಟ್ಟ ಕನ್ನಡ ರಸಪ್ರಶ್ನೆ ಕಾರ್ಯಕ್ರಮವಂತೂ ಮರೆಯಲಾಗದ ಕ್ಷಣ, ಗೆದ್ದವರಿಗೆ ಪುಸ್ತಕ ರೂಪದಲ್ಲಿ ಕೊಟ್ಟ ಬಹುಮಾನ ಆಹಾ........

ಅಂದು ಷಡ್ರೊಸೋಪೇರಿತ ರುಚಿ ಹಾಗೂ ಶುಚಿಯೊಂದಿಗೆ ಭೋಜನವನ್ನು ಆಯೋಜಿಸಿದ್ದ ಬಿ.ಎ.ಐ.ನ ಸದಸ್ಯರಾದ ಶ್ರೀ ವಾಸುದೇವನ್, ಶ್ರೀ ಕೆ. ಎಂ. ರಘುನಾಥ್, ಶ್ರೀ ಗೋಪಾಲ್ ಹಾಗೂ ಶ್ರೀ ವಿಶ್ವನಾಥ್ ರವರಿಗೆ ಬಾಯಿ ಚಪ್ಪರಿಸಿದ್ದೆ ಕೃತಜ್ಞತೆ ಹೇಳುವಂತಿತ್ತು.

ಗೌರವ ಕಾರ್ಯದರ್ಶಿ ಶ್ರೀ ಆರ್ ರಘುನಾಥ್‌ರವರು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡ ಈ ಕಾರ್ಯಕ್ರಮ ವಿಶಿಷ್ಟ, ವಿನೂತನ, ವೈಚಾರಿಕತೆಯಿಂದ ಮೇಳೈಸಿದ ಈ ದಿನ ಮರೆಯಲಾಗದ ಮಧುರ ಕ್ಷಣ.

– ಎಚ್.ಬಿ. ರವಿರತ್ನಾಕರ





SMC Shruthi Ceramics
Dealers in : Wall & Floor Tiles, Vitrified Tiles, G.I., P.V.C. Pipes & Fittings Sanitary Wares, C.P. Fittings, Kitchen Sink, Bath Tubs & Water Tanks
# 138, M.G. Koppal, Main Road, Near Surya Bakery, Hebbal, Mysuru-16
Ph : 0821-2302013, Cell : 98451 08854.

INFINITY EVENTS
D J VINOD
Sound and lighting rentals * Ballon decoration
Theme parties * Confrence * Fashion show
Wedding * Dandiya * Live concert *
Artist management *
One stop solutions for entertainment...
98864 16109, 96206 72888
Email : deejayveenod@gmail.com

Revani Prasad B.H.
B.E., F.I.E
Class 1 PWD Contractor & Builder
# 2888, Pampapathi Road, Saraswathipuram, Mysore-9
Cell : 94480 74653

ENCON
ENCON Projects
# 123, 3rd Main Road, Jayalakshmipuram, Mysuru - 570 012
Phone: 0821-2512600
Mobile: +91 99455 52201
e-mail: enconprojectsmys@gmail.com

Pradeep Jain
Dilip Jain
JAIN Hardware & Plywood
#635, Ashoka Road, Mysore - 1
Ph : 0821-4247014, Cell: 9886690014, 9341465014

S. SHASHIRAJ, B.E., ENGINEER
Expertise in: Office & Residence Interior
Construction of Residential &
Commercial Buildings, Building Elevation Works
Ph : 98451 22179, 0821-2542179

# ಮಕ್ಕಳ ದಿನಾಚಾರಣೆಯ ಸಂಭ್ರಮ




ನವೆಂಬರ್ 14, ಭಾರತದ ಪ್ರಥಮ ಪ್ರಧಾನಿ ಜವಹರಲಾಲ್ ನೆಹರು ಅವರ ಜನ್ಮದಿನ. ಆ ದಿನವನ್ನು ಅವರ ಬಯಕೆಯಂತೆ "ಮಕ್ಕಳ ದಿನಾಚಾರಣೆ"ಯನ್ನಾಗಿ ಆಚರಿಸುವುದು ದಶಕಗಳಿಂದ ನಡೆದುಬಂದ ರೂಢಿ. ಸಾಮಾನ್ಯವಾಗಿ ಮಕ್ಕಳ ದಿನದ ಆಚರಣೆ ನಡೆಯುವುದು, ಶಾಲೆಗಳಲ್ಲಿ ಮಾತ್ರ. ಆದರೆ ನಮ್ಮ ಸ್ಫೂರ್ತಿ ಮಹಿಳಾ ಘಟಕವು, ಮಕ್ಕಳ ದಿನ ಆಚರಿಸಬೇಕೆಂದು ನಿರ್ಧರಿಸಿದ್ದೂ ಅಲ್ಲದೆ, ಪ್ರತೀ ವರ್ಷವೂ ಒಂದೊಂದು ಬಡ ಶಾಲೆಗಳನ್ನು ಆಯ್ಕೆ ಮಾಡಿಕೊಂಡು, ಅಲ್ಲಿನ ಮಕ್ಕಳಿಗೆ ತಮ್ಮ ಕೈಲಾದ ಸಹಾಯ–ಸಹಕಾರಗಳನ್ನು ನೀಡುತ್ತಾ ಬಂದಿದೆ. ಹಾಗೇಯೇ ಪ್ರಸಕ್ತ 2019ನೆ ಸಾಲಿನಲ್ಲಿ 'ಸಂಜೀವಯ್ಯ ಶಾಲೆ' ಗೆ ನೆರವಿನ ಹಸ್ತ ನೀಡಲು ಉದ್ದೇಶಿಸಿತು. ಅದರಂತೆ ಸ್ಫೂರ್ತಿ ಸಂಸ್ಥೆಯು, ತಮ್ಮ ಸದಸ್ಯರು ಹಾಗೂ ಪದಾಧಿಕಾರಿಗಳೊಂದಿಗೆ ದಿನಾಂಕ 13ನೇ ನವೆಂಬರ್ 'ಸಂಜೀವಯ್ಯ ಶಾಲೆ' ಗೆ ಖುದ್ದು ಭೇಟಿ ನೀಡಿ, ಅಲ್ಲಿನ ಮಕ್ಕಳು ಹಾಗೂ ಪ್ರಾಧ್ಯಾಪಕ ವರ್ಗದೊಂದಿಗೆ ಮಕ್ಕಳ ದಿನಾಚರಣೆಯನ್ನು ಆಚರಿಸಿದ್ದು ವಿಶೇಷವಾಗಿತ್ತು.

ಪ್ರಾಧ್ಯಾಪಕಿಯೊಬ್ಬರ ಸ್ವಾಗತ ಭಾಷಣದೊಂದಿಗೆ ಬೆಳಿಗ್ಗೆ 11 ಗಂಟೆಗೆ ಕಾರ್ಯಕ್ರಮ ಆರಂಭವಾಯಿತು. ಮೊದಲಿಗೆ ಅದೇ ಶಾಲೆಯ ಮೂವರು ಬಾಲಕಿಯರು ಸುಂದರ ಪ್ರಾರ್ಥನೆ ಗೀತೆಯೊಂದನ್ನು ಹಾಡುವ ಮೂಲಕ, ಉಳಿದ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು. ನಂತರ ಶಾಲೆಯ ಅಧ್ಯಕ್ಷರು ಮಾತನಾಡಿ ಅತ್ಯಂತ ಕಡಿಮೆ ಶುಲ್ಕ ತೆಗೆದುಕೊಳ್ಳುತ್ತಾ, ಎಷ್ಟೋ ಬಾರಿ ತಮ್ಮ ಪಿಂಚಣಿ ಹಣದಿಂದಲೇ ಶಿಕ್ಷಕ







ವರ್ಗದ ಸಂಬಳ ನೀಡುತ್ತಾ, ಎಷ್ಟು ಕಷ್ಟದಲ್ಲಿ ಶಾಲೆ ನಡೆಸುತ್ತಿದ್ದಾರೆ ಎಂಬುದನ್ನು ವಿವರಿಸಿದರು. ಜೊತೆಗೆ ಸ್ಫೂರ್ತಿ ಸಂಸ್ಥೆಯು ಸಹಾಯ–ಸಹಕಾರ ಹಾಗೂ ಅದರ ಸಾಮಾಜಿಕ ಕಳಕಳಿಯನ್ನು ಶ್ಲಾಘಿಸಿದರು.

ನಂತರ ಸ್ಫೂರ್ತಿ ಅಧ್ಯಕ್ಷರಾದ ಶ್ರೀಮತಿ ಅನಿತಾ ಶ್ರೀಧರ್ ಅವರು ಮಾತನಾಡುತ್ತಾ, ನವೆಂಬರ್ ತಿಂಗಳಲ್ಲಿ ಬರುವ ಎರಡು ಮಹತ್ತರ ದಿನಗಳಾದ, ಕನ್ನಡ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆಯ ಬಗ್ಗೆ ಪ್ರಸ್ತಾಪಿಸಿದರು. 'ಎಲ್ಲಾದರೂ ಇರು ಎಂಥಾದರೂ ಇರು ಎಂದೆದಿಗೂ ನೀ ಕನ್ನಡವಾಗಿರು' ಎಂಬ ರಾಷ್ಟ್ರಕವಿ ಕುವೆಂಪು ಅವರ ಸಾಲುಗಳನ್ನು ಸ್ಮರಿಸುತ್ತಾ, ನಾವೆಲ್ಲರೂ ಕೇವಲ ನವೆಂಬರ್ ಕನ್ನಡಿಗರಾಗದೆ, ನಿತ್ಯ ನಮ್ಮ ನಾಡು–ನುಡಿ–ಸಂಸ್ಕೃತಿಯ ಆಚರಣೆಯಲ್ಲಿ ತೊಡಗಬೇಕೆಂಬುದನ್ನು ತಿಳಿಸಿದರು.

ಸ್ಫೂರ್ತಿ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀಮತಿ ವಾಣಿ ಸುಬ್ರಹ್ಮಣ್ಯ ಅವರು ಮಕ್ಕಳು ಆಟ–ಪಾಠಗಳೆರಡರಲ್ಲೂ ಭಾಗವಹಿಸಿ ಆರೋಗ್ಯವಂತರಾಗಿರಬೇಕೆಂದು ಕರೆ ನೀಡಿದ್ದಲ್ಲದೆ, ಮಕ್ಕಳಿಗೆ ಕೆಲವು ಹಿತವಚನಗಳನ್ನು ಬೋಧಿಸಿದರು. ತದನಂತರ ಆಟೋಟ ಸ್ಪರ್ಧೆಗಳಲ್ಲಿ ಬಹುಮಾನಗಳಿಸಿದ ಮಕ್ಕಳಿಗೆ ಸ್ಫೂರ್ತಿ ವತಿಯಿಂದ, ಅವರಿಗೆ ಉಪಯುಕ್ತವಾಗಬಲ್ಲ ಪದಾರ್ಥಗಳನ್ನು ಬಹುಮಾನವಾಗಿ ವಿತರಿಸಿದರು. ಜೊತೆಗೆ ಸ್ಫೂರ್ತಿ ಪ್ರಾಯೋಜಿತ ಮಕ್ಕಳಿಗೆ ಗುರುತಿನ ಚೀಟಿಗಳನ್ನು




MAHABALESHWARA BAIRY
Class I Builder
Ph : [R] 2362559, Reliance : 3182300,
Mobile :94480-52559

MANASA COATS
Mfrs. of MANASA Acrylic & Cement Texture
Coatings, Acrylic & Cement Wall Putty & Emulsions,Speciality Coatings.
Mobile : 8861005377, Ph : 0821-2485397, 2362265
E-mail:manasacoats@gmail.com
Web: www.manasacoats.com

CADD STATION TECHNOLOGIES Pvt. Ltd.,
An ISO 9001-2008 Certified Co.
CADD STATION LAB
A NABL Accredited Lab
Project Management Consultants
Architectural & Structural Engineering · Digital Engg. Surveyors
Soil Investigations · Highway Concrete/Tiles
A complete Civil Engineering Material Testing
Third Party Inspection
Web : www.caddstation.in E-mail : cstpl.mys@gmail.com
Tel : 0821-4242963, Mob : 7338191525
Ph : 0821-4257038, Mob : 9590537007

P.G. Setty Construction Technology Pvt. Ltd.
PG SETTY the tech people
Ph : 0821-4257202, Fax : 0821-4257203
E-mail : pgsmysore@pgsetty.com Web : www.pgsetty.co

SUPREME CONCRETE BLOCK
Mfrs. of Hollow & Solid Concrete Blocks
Pavement Block & Cement Dealers
Ph : 2403135, [R] 2560182,
Cell : 94480 84135

FN Infrastructure Pvt. Ltd.,
FOUNDATIONS
DEVELOPERS & PROMOTERS
Expression for home!
Ph : 0821-4260273, 2420044, Cell :93421 87974, 93421 88155
Email:info@myhomedevelopers.com Web: www.myhomedevelopers.com




ಹಂಚಿ ಮಕ್ಕಳ ಕರತಾಡನಕ್ಕೆ ಕಾರಣರಾದರು. ಶಿಕ್ಷಕರೊಬ್ಬರು ವಂದನಾರ್ಪಣೆ ಮಾಡಿ ಕಾರ್ಯಕ್ರಮಕ್ಕೆ ಇತಿಶ್ರೀ ಹಾಡಿದರು.

ಎಲ್ಲಾ ಕಾರ್ಯಕ್ರಮಗಳ ನಂತರ ಸ್ಫೂರ್ತಿಯ ಮಾಸಿಕ ಸಭೆಯನ್ನೂ ಅಲ್ಲೇ ಸಂಪನ್ನಗೊಳಿಸಿ, ಅಂತಿಮವಾಗಿ ನೆರೆದಿದ್ದ ಎಲ್ಲಾ ಮಕ್ಕಳೂ ನಮ್ಮ ಸಂಸ್ಥೆಯ ವತಿಯಿಂದ ಏರ್ಪಡಿಸಿದ್ದ ಊಟ ಹಾಗೂ ಸಿಹಿ ತಿಂಡಿಯನ್ನು ಭುಜಿಸಿ ಸಂತೃಪ್ತ ನಗೆ ಬೀರಿ ನಮ್ಮನ್ನು ಬೀಳ್ಕೊಟ್ಟರು. ಅವರ ಆ ನಿಷ್ಕಲ್ಮಶ ನಗೆ ನಮ್ಮ ಕಣ್ಣುಗಳಲ್ಲಿ ಬಹಳ ಹೊತ್ತಿನ ತನಕ ಉಳಿದಿದ್ದು ಸುಳ್ಳಲ್ಲ.

–ಜಾಹ್ನವೀ ದಿನೇಶ್

# ಆರೋಗ್ಯ ತಪಾಸಣಾ ಶಿಬಿರ



ದಿನಾಂಕ ೨೭-೧೧-೨೦೧೯ರಂದು ಬೆಳಿಗ್ಗೆ ೧೦.೩೦ಕ್ಕೆ ಪ್ರಾರಂಭವಾದ ಆರೋಗ್ಯ ತಪಾಸಣಾ ಶಿಬಿರದ ಸಮಾರಂಭವನ್ನು "ಸ್ಫೂರ್ತಿ" ಅಧ್ಯಕ್ಷೆಯಾದ ಶ್ರೀಮತಿ ಅನಿತಾ ಶ್ರೀಧರ್ ಹಾಗೂ ಅವರ ತಂಡದವರು ಏರ್ಪಡಿಸಿದ್ದರು.

ಶ್ರೀಮತಿ ಅನಿತಾರವರು ಸ್ವಾಗತಕಾರಿಣಿಯಾಗಿ ಬಿಎಐ ಮೈಸೂರು ಘಟಕದ ಅಧ್ಯಕ್ಷರಾದ ಶ್ರೀ ಬಿ.ಎಸ್. ದಿನೇಶ್‌ರವರನ್ನು ಗೌರವಾನ್ವಿತ ಅತಿಥಿಯಾಗಿ ಮತ್ತು ಎಂ.ಬಿ.ಸಿ.ಟಿಯ ಮ್ಯಾನೇಜಿಂಗ್ ಟ್ರಸ್ಟಿ ಶ್ರೀ ಎಸ್.ಆರ್. ಸ್ವಾಮಿ ಅವರನ್ನು ಸಮಾರಂಭದ ಉದ್ಘಾಟನೆಗೆಂದು ಆಹ್ವಾನಿಸಿ ಸ್ವಾಗತಿಸಿದರು.

ಉದ್ಘಾಟನೆಯ ಪ್ರಮುಖ ಉದ್ದೇಶವಾದ ಆಹಾರ ಸಮತೋಲನ, ಸ್ವಚ್ಛತೆ, ಆರೋಗ್ಯ ಹಾಗೂ ವೈದ್ಯಕೀಯ ಆಗುಹೋಗುಗಳು. ಚಿಕಿತ್ಸೆಯ ಕಿರುಪರಿಚಯ ನೀಡಿದರು. ನಂತರ ಆಹ್ವಾನಿಸಲಾದ ಗಣ್ಯರುಗಳಿಂದ ಬಿ.ಪಿ. ಚೆಕ್ ಮಾಡುವುದರ ಮೂಲಕ ಸಮಾರಂಭವನ್ನು ಉದ್ಘಾಟಿಸಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶ್ರೀ ಬಿ.ಎಸ್. ದಿನೇಶರವರು ಉಚಿತ ಚಿಕಿತ್ಸಾ ಶಿಬಿರದ ಅನುಕೂಲಗಳನ್ನು ಹಾಗೂ ಸರ್ಕಾರಿ





The Centre of Happiness
BASANT CONVENTION CENTRE
#12/A-3/1, 3rd Stage, Industrial Suburb, Next to Brigade Sparkle Apartment, Mysuru - 570 008, Office: 0821 2485291, Mob: 94480 58291
Email : basantiles@hotmail.com | www.basantconventioncentre.com

Prop. K.R. Prabhakar Rao
✆ : 93421 83065
99866 81509
Srinidhi Icon Square
Tiles | Interiors | Home Automation
#3/4C, 2nd Floor, Poonam Glitorium Building, Hunsur Main Road, Hinkal, Mysuru - 570017
srinidhiiconsquare@gmail.com

SHREE PACKING INDUSTRIES
All kinds of wood available
262/a Hebbal Industrial Area, Rane Madras Road Mysore 18

TAPOVAN PROJECTS
☏ : 99452 48101
| Engineers | Builders | Developers |
Email : mail@enclavesmysore.com
Website : enclavesmysore.com

BLUE SAND
Sri Balaji Blue Sand Industries
#1/B, Diya Group, Kantharaj Urs Road
Saraswathipuram, Mysore - 570009
Ph : 0821-4287333, Cell : 9481287333

The States Engineering Building Solutions......
N. Subramanya
☎ 98451 14001
Construction of Steel Buildings, PEB, Roofing, Dry Wall, False Celling, Elevation & Plumbing
E-mail : statesengg@gmail.com

ಆಸ್ಪತ್ರೆಗಳ ಸಹಾಯ ಮತ್ತು ಅದರ ಸದುಪಯೋಗಗಳನ್ನು ಪಡೆದುಕೊಳ್ಳಬೇಕೆಂದು ತಿಳಿ ಹೇಳಿ ಆರೋಗ್ಯದ ಕಾಳಜಿ ಹಾಗೂ ಆಹಾರದ ಕ್ರಮ ಮತ್ತು ಚಿಕಿತ್ಸೆಯ ಅನುಕೂಲಗಳನ್ನು ತಿಳಿಸಿ ತಮ್ಮ ಅಂತರಾಳದ ಮಾತನ್ನು ಎಲ್ಲರಿಗೂ ತಲುಪಿಸುವಂತೆ ಕೋರಿ ಅಮೂಲ್ಯವಾದ ನುಡಿಯಿಂದ ಎಲ್ಲರಿಂದ ಚಪ್ಪಾಳೆ ಗಿಟ್ಟಿಸಿದರು.



ಸಮಾರಂಭದ ಇನ್ನೋರ್ವ ಅತಿಥಿಯಾದ ಶ್ರೀ ಎಸ್.ಆರ್. ಸ್ವಾಮಿಯವರು ಕೂಡ ಉಚಿತ ಚಿಕಿತ್ಸಾ ಶಿಬಿರದ ಪೂರ್ಣ ಮಾಹಿತಿ ಕೊಟ್ಟು ಅಲ್ಲಿನ ಸೌಕರ್ಯ ಹಾಗೂ ಸವಲತ್ತುಗಳನ್ನು ಪಡೆಯಬೇಕೆಂದು ಮತ್ತು ಅದರಿಂದ ತೊಂದರೆಗಳಿದ್ದಲ್ಲಿ ಹಾಗೂ ಹೆಚ್ಚಿನ ಸೌಕರ್ಯ ಬೇಕಿದ್ದಲ್ಲಿ ತಿಳಿಸಿರೆಂದು ಕಾರ್ಮಿಕ ಬಂಧುಗಳಲ್ಲಿ ಮತ್ತು ಇತರರಿಗೂ ತಲುಪುವಂತೆ ಕೋರಿ ವಿನಂತಿಸಿದರು. ಹಾಗೂ ಶಿಬಿರದ ಉಚಿತ ಚಿಕಿತ್ಸೆಗಳಿಂದ ಬಿ.ಪಿ., ಶುಗರ್, ಹೆಚ್‌ಐವಿ, ಹಲ್ಲಿನ ತಪಾಸಣೆ ಮತ್ತು ಕಣ್ಣಿನ ತಪಾಸಣೆಯ ಉಪಯೋಗ ಪಡೆದುಕೊಳ್ಳಬೇಕೆಂದು ತಿಳಿ ಹೇಳಿದರು. ಸುಮಾರು ೫೨ ಜನ ಕಾರ್ಮಿಕ ಬಂಧುಗಳು ಈ ಶಿಬಿರದ ಸಹಾಯ ಪಡೆದರು.

ಶಿಬಿರದ ಮುಖ್ಯ ರುವಾರಿ ಡಾ. ಸುನೀತಾರವರು ಹೆಚ್‌ಐವಿ ಬಗ್ಗೆ ಸಾಮಾಜಿಕ ಕಳಕಳಿ ಕುರಿತು ಮಾತನಾಡಿದರು. ಡಾ. ಮಣಿಕರ್ಣಿಕಾರವರು ಕಣ್ಣಿನ ಬಗ್ಗೆ ಕಾಳಜಿ ಹಾಗೂ ಸೀಜ಼ನ್ ಹಣ್ಣುಗಳು, ತರಕಾರಿಗಳ ಸೇವನೆಯ ಕುರಿತು ಹೇಳಿದರು ಮತ್ತು ದೇಹದ ಸುಸ್ಥಿತಿಯನ್ನು ಕಾಪಾಡಿಕೊಳ್ಳಲು ಧ್ಯಾನ (ಮೆಡಿಟೇಶನ್)ದ ಅವಶ್ಯಕತೆಯನ್ನು ಚೆನ್ನಾಗಿ ಮನಮುಟ್ಟುವಂತೆ ವಿವರಿಸಿದರು.




ಕೊನೆಯದಾಗಿ ವಂದನಾರ್ಪಣೆಯನ್ನು ಮಾಡಿದ ಸ್ಪೂರ್ತಿ ಗೌ.ಕಾರ್ಯದರ್ಶಿ ಶ್ರೀಮತಿ ವಾಣಿಸುಬ್ರಮಣ್ಯರವರು ಶ್ರೀ ಎಸ್.ಆರ್.ಸ್ವಾಮಿ ಹಾಗೂ ಶ್ರೀ ಬಿ.ಎಸ್. ದಿನೇಶ್ ಇವರುಗಳಿಗೆ ತಮ್ಮ ಹೃತ್ಪೂರ್ವಕ ವಂದನೆಗಳನ್ನು ತಿಳಿಸಿದರು. ಕಾರ್ಯಕ್ರಮವು ಸುಸೂತ್ರವಾಗಿ ನೆರವೇರಲು ಜಾಗದ ಅನುವು ಮಾಡಿಕೊಟ್ಟ ಶ್ರೀ ವಿಶ್ವನಾಥ್‌ರವರು ತಮ್ಮ ಕಟ್ಟಡ ನಿರ್ಮಾಣದ ಸ್ಥಳದಲ್ಲೇ ಅನುಮತಿ ಕೊಟ್ಟಿದ್ದಾಗಿ ಅವರಿಗೂ ವಂದನೆಗಳನ್ನು ತಿಳಿಸಿದರು. ಶಿಬಿರದ ಸಿಬ್ಬಂದಿ ವರ್ಗದವರಿಗೂ ಮತ್ತು ಕಾರ್ಮಿಕ ವರ್ಗದವರಿಗೂ ಅವರ ಕುಟುಂಬದವರಿಗೂ ಹೃದಯ ಪೂರ್ವಕ ವಂದನೆಗಳನ್ನು ತಿಳಿಸಿದರು.

ಕಾರ್ಯಕ್ರಮ ಮುಗಿದ ನಂತರ ಶುಚಿ ಹಾಗೂ ರುಚಿಯಾಗಿ ಊಟದ ವ್ಯವಸ್ಥೆಯನ್ನು ಮಾಡಿದ ಶ್ರೀಮತಿ ಪೂರ್ಣಿಮಾ ವಿಶ್ವನಾಥ್ ಅವರಿಗೂ ಸಹ ಧನ್ಯವಾದಗಳನ್ನು ತಿಳಿಸಿದರು.


**– ಪುಷ್ಪಾ ಸ್ವಾಮಿ**

---



ಶ್ರೀ ವಿಠಲ್ ನಂಜಪ್ಪ

**ಶ್ರೀಯುತ ವಿಠಲ್ ನಂಜಪ್ಪ,** ಬಿ.ಎ.ಐನ ಸಂಸ್ಥಾಪಕ ಸದಸ್ಯರು ತಾ. 19–12–2019ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.




ಸ್ಫೂರ್ತಿ ಮಾಜಿ ಅಧ್ಯಕ್ಷೆ ಶ್ರೀಮತಿ ಗೀತಶ್ರೀ ಸುಬ್ರಮಣ್ಯರಾವ್ ಅವರ ತಂದೆ ಶ್ರೀ **ಕೋಟೇಶ್ವರ ಸೂರ್ಯನಾರಾಯಣರಾವ್** ಅವರು ತಾ. 11–12–2019 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.

ಬಿ.ಎ.ಐ ಹಾಗೂ ಸ್ಪೂರ್ತಿ ಸಂಸ್ಥೆಯವರು ಅವರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ಅವರ ಕುಟುಂಬದವರಿಗೆ ದೇವರು ಧೈರ್ಯ ನೀಡಲೆಂದು ಆಶಿಸುತ್ತೇವೆ.

Dinesh B.S.
✆ 98440 33314
Sri Ganesh Steels
Dealers in : Iron, Steel & Hardware
☎ 0821-2344905, 2544113
E-mail : dinisgs@gmail.com

V. NAGARAJ (BAIRY)
Class 1 Contractor
☎ : 0821-2412118
✆ : 9845117878
nagarajbairy@gmail.com
V.N. Developers
Well developed sites at:
➲ Bhoomika Gardens at Huyilalu ➲ Bhoomika Gardens at Hunsur
➲ Sayi Garden at Vajamangala ➲ Viveka Gardens at Madahally
Email :vn_constructions@yahoo.co.in, Web:vnconstructions.com

PRAMUR®
a building force
An ISO 9001 : 2000 Company
Excellence through Experience
Call: 0821-2333906, 2333521
Web: www.pramurgroup.com
CONTRACTS
| Real Estate Developement | Aluminium Building Systems |
| Concrete Products | Premix Plaster & Mortar |
| Prestressed precast Lintels |

SHYAM STEELS
Dealers in TMT bars
%: 2562029,
& : 9342188155

DARLA Ceramics
(A Unit of PC,Darla&Co.,)
Danmal Darla
Sanitary Logistics
Ph : 0821-2422402/2422403,
Fax :0821-426991 Email: darlaceramics@gmail.com

Ashok G
☎ : 94480 61112
VYSHAK GROUP OF HOTELS




# ಬಿ.ಎ.ಐ. ಕರೋಕೆ ಕ್ಲಬ್‌ನ ಕನ್ನಡ ರಾಜ್ಯೋತ್ಸವ ಸಮಾರಂಭ







ಬಿ.ಎ.ಐ. ಕರೋಕೆ ಕ್ಲಬ್ ಮೈಸೂರು ಘಟಕದ ಏಳನೇ ಆವೃತ್ತಿ ತಾರೀಖು ೨೨ನೇ ನವೆಂಬರ್ ೨೦೧೯ರಂದು ಮೈಸೂರು ಬಿಲ್ಡರ್ಸ್ ಛಾರಿಟೆಬಲ್ ಟ್ರಸ್ಟ್ ಸಭಾಂಗಣದ, ಸಭೆಯ ಕೊಠಡಿಯಲ್ಲಿ ಸಂಜೆ ೪ ಘಂಟೆಯಿಂದ ೬.೩೦ರವರೆಗೆ ಕ್ಲಬ್ಬಿನ ಸದಸ್ಯರಿಂದ ಕನ್ನಡ ಚಿತ್ರಗೀತೆಗಳ ಕಾರ್ಯಕ್ರಮವನ್ನು ನೆರವೇರಿಸಲಾಗಿತ್ತು. ಎಂ.ಬಿ.ಸಿ.ಟಿ ಮ್ಯಾನೇಜಿಂಗ್ ಟ್ರಸ್ಟಿ ಶ್ರೀ ಎಸ್.ಆರ್. ಸ್ವಾಮಿಯವರು ಕಾರ್ಯಕ್ರಮದ ಚಾಲನೆ ನೀಡಿದರು. ಅವರು ತಮ್ಮ ಭಾಷಣದಲ್ಲಿ ಕರೋಕೆ ಕ್ಲಬ್‌ನ ಕಾರ್ಯಕ್ರಮವನ್ನು ಪ್ರಶಂಸಿಸಿದರು ಹಾಗೂ ಎಲ್ಲಾ ಸದಸ್ಯರುಗಳನ್ನು ಅಭಿನಂದಿಸಿ ಈ ಕರೋಕೆ ಕ್ಲಬ್ಬಿನಿಂದ ಇನ್ನು ಹೆಚ್ಚು ಪ್ರಭಾವಿ ಗಾಯಕರು ಬರಬೇಕೆಂದು ಆಶಿಸಿದರು. ಎಲ್ಲರಿಗೂ ರಾಜ್ಯೋತ್ಸವದ ಶುಭಾಶಯಗಳನ್ನು ತಿಳಿಸಿದರು. ನವೆಂಬರ್ ಮಾಸ ರಾಜ್ಯೋತ್ಸವದ ಪ್ರಯುಕ್ತ ಕಾರ್ಯಕ್ರಮದ ಆವರಣದಲ್ಲಿ ಕೆಂಪು ಹಾಗೂ ಹಳದಿ ಬಲೂನಿನ ಅಲಂಕಾರ ಎಲ್ಲರ ಮನದಲ್ಲಿ ಹರುಷ ಹುಟ್ಟಿಸಿತ್ತು. ಈ ಕಾರ್ಯಕ್ರಮದ ಪ್ರಾಯೋಜಕರಾಗಿ ಬಿ.ಎ.ಐನ ಸದಸ್ಯರು ಶ್ರೀ ಉದಯಕುಮಾರ್ ಅವರ ಹಾಡಿನೊಂದಿಗೆ ಕಾರ್ಯಕ್ರಮ ಪ್ರಾರಂಭಿಸಿದೆವು. ಕ್ಯಾಡ್‌ಸ್ಟೇಷನ್‌ನ ಶ್ರೀ ರಘುನಾಥ್‌ರವರು ತಾವೇ ಸ್ವತಃ ಬಂದು ಎಲ್ಲಾ ಬಲೂನ್‌ಗಳನ್ನು ಕಟ್ಟಿ ವೇದಿಕೆಯನ್ನು ಸುಂದರವಾಗಿ ಅಲಂಕರಿಸಿದ್ದು ನಮ್ಮಗಳ ಹರುಷ ಮುಗಿಲು ಮುಟ್ಟಿತು. ೭ನೇ ಆವೃತ್ತಿಯಲ್ಲಿ ಕರೋಕೆ ಕ್ಲಬ್ಬಿನ ಬಿ.ಎ.ಐ ಹಾಗೂ ಸ್ಫೂರ್ತಿಯ ೨೮ ಸದಸ್ಯರುಗಳು ಕನ್ನಡ ಚಿತ್ರಗೀತೆಗಳನ್ನು ಹಾಡುವ ಮೂಲಕ ಎಲ್ಲರನ್ನು ರಂಜಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಎನ್. ಸುಬ್ರಹ್ಮಣ್ಯ ಹಾಗೂ ಶ್ರೀಮತಿ ಪೂರ್ಣಿಮ ವಿಶ್ವನಾಥ್ ಅವರುಗಳು ತುಂಬಾ ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಬಿ.ಎ.ಐ ಮೈಸೂರು ಘಟಕದ ಅಧ್ಯಕ್ಷರು ಶ್ರೀ ಬಿ.ಎಸ್. ದಿನೇಶ್, ಗೌ.ಕಾರ್ಯದರ್ಶಿ ಆರ್. ರಘುನಾಥ್ ಹಾಗೂ ಹಲವಾರು ಸದಸ್ಯರುಗಳು ಉಪಸ್ಥಿತರಿದ್ದರು. ಶ್ರೀ ಸ್ಟಾನಿ ಮರ್ಸರ್‌ರವರು ತಮ್ಮ ಧ್ವನಿವರ್ಧಕ ಯಂತ್ರವನ್ನು ಅಳವಡಿಸಿದ್ದು ಕಾರ್ಯಕ್ರಮಕ್ಕೆ ಶೋಭೆ ತಂದಿತು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲಾ ಗಣ್ಯರು ಹಾಗೂ ಸದಸ್ಯರುಗಳಿಗೆ ಶ್ರೀ ಎನ್. ಸುಬ್ರಹ್ಮಣ್ಯ ಅವರು ಧನ್ಯವಾದಗಳನ್ನು ಸಲ್ಲಿಸಿದರು. ಕಾರ್ಯಕ್ರಮದ ಪ್ರಾಯೋಜಕರು ಶ್ರೀ ಉದಯಕುಮಾರ್ ಹಾಗೂ ಕ್ಯಾಡ್ ಸ್ಟೇಷನ್ ರಘುನಾಥ್ ಅವರುಗಳಿಗೆ ವಿಶೇಷ ಧನ್ಯವಾದಗಳನ್ನು ಸಲ್ಲಿಸಿದರು. ಕಾರ್ಯಕ್ರಮ ಮುಗಿದ ನಂತರ ಲಘು ಉಪಾಹಾರ ಏರ್ಪಡಿಸಲಾಗಿತ್ತು.



**–ಶೀಲಾ ಗುರುದತ್**

Shravya CERAMIC
R. Sangam
9342833884
#21/22, 2nd Cross, (Behind Sunanda Agarbathi) Bamboo Bazar, Mysuru-21. Ph : 0821-4266992. Cell: 9845303510
DISTRIBUTOR FOR ALL KINDS OF TILES, SANITARY & TAPS

S.L. Dinesh ✆ 94487 52964
YUKTHA PAVEMENT BLOCKS
Megha Concrete Blocks
Mfrs. Colour Pavement Blocks, Concrete Blocks, Kurb, L Shape, U shape Drain Blocks

ARYAN CONSTRUCTION
Consultants & Contractors
Off.: #375, Cheluvamba Agrahara, K.R.Mohalla, Mysore -24
Ph : +91 0821-244 2252
Email: aryanconstructionsmysore@gmail.com

ESS & KAY CONSTRUCTION
Contractor for Railway & C.P.W.D Ph: 0821-2480671
SUDEENDRA
Cell: 98444 0572
Fire Cools
(Trained Fire Force Service)
Venkatesh- 9886466266
ASHRITH Pest Control
(The House of pest eradicate)
Sathyanarayana
9844404232
#125, 10th Cross, 2nd Main, Vidyaranyapuram, Mysore.

S.S.STEELS CORPORATION
Stockist & Dealer in : Stainless Steel Pipes, Pipe Fittings, Sq. Rods, Hexagon Rods, Flats, Railings Fittings, Design pipes & All types of Fabrication, accessories etc.,
#140/2B, Metagalli, Near Sujatha Theatre, K.R.S. Road, Mysuru-570 016
Email:info@sssteelcorp.co.in ; sssteelcorp@gmail.com
Web. : www.sssteelcorp.co.in Cell : 9448458973, Off. : 0821 2518973

STG CONCRETE PRODUCTS
STG RMC Ready Mix Plant
No. 368/3, Hebbal Industrial Area, Hebbal, Near Kids Ice Cream, Mysore - 570 016.
Cell : 9945963545
9945000414

# ಸಗಣಿಯಿಂದ ಗೋಡೆ ಪೈಂಟ್ ಮಾಡಿ ಎಲ್ಲರ ಮೆಚ್ಚುಗೆ ಗಳಿಸಿದ ಇರ್ದೆಯ ಡಾ. ಶಶಿಶೇಖರ್ ಭಟ್

"ಮನೆ ಕಟ್ಟಿ ನೋಡು, ಮದುವೆ ಮಾಡಿ ನೋಡು ಎನ್ನುವ ಮಾತು ಜನಜನಿತ. ಈ ಎರಡೂ ಕಾರ್ಯಗಳಲ್ಲಿ ಮುಂದಾಗುವ ಸಮಸ್ಯೆಗಳು, ಸಂಕಷ್ಟಗಳು ಎದುರಿಸಿದವನಿಗೇ ಗೊತ್ತು. ಕನಸಿನ ಮನೆ ಕಟ್ಟುವುದೆಂದರೆ ಸುಲಭದ ಮಾತಲ್ಲ. ಹಲವಾರು ಕನಸು, ಆಸೆ, ಆಕಾಂಕ್ಷೆಗಳನ್ನಿಟ್ಟುಕೊಂಡು ಕಟ್ಟಿದ ಮನೆಯನ್ನು ಎಷ್ಟು ಸಾಧ್ಯವೋ, ಅಷ್ಟು ಸುಂದರವಾಗಿ ಮಾಡಲು ಪ್ರಯತ್ನಿಸದೇ ಇರುವವರು ಬಹಳ ವಿರಳ. ಅದೆಲ್ಲಾ ಒಂದು ಕಡೆಯಾದರೆ ಮನೆಯು ಅತ್ಯಂತ ಆಕರ್ಷಕವಾಗಿ ಕಾಣಲು ಟ್ರೆಂಡಿ ಕಲರ್‌ಗಳನ್ನು ಬಳಸೋದು ಇಂದಿನ ಫ್ಯಾಷನ್. ಹೌದು, ಸಾಮಾನ್ಯವಾಗಿ ಮನೆಯ ಗೋಡೆ ಪೈಂಟ್ ಮಾಡಲು ಮಾರುಕಟ್ಟೆಯಲ್ಲಿ ಸಿಗುವ ವಿವಿಧ ಪ್ರಕಾರದ ರಾಸಾಯನಿಕ ಮಿಶ್ರಿತ, ಸಿಂಥೆಟಿಕ್ ಪೈಂಟ್‌ಗಳನ್ನು ಬಳಸಲಾಗುತ್ತದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ವ್ಯಕ್ತಿಯೊಬ್ಬರು ಈ ರಾಸಾಯನಿಕ ಪೈಂಟ್‌ಗಳನ್ನು ಬಳಸದೆ ದೇಸಿ ಹಸುಗಳ ಸಗಣಿಯಲ್ಲೇ ಪೈಂಟ್ ತಯಾರಿಸಿ ಮನೆಯ ಗೋಡೆಗಳನ್ನು ಸಿಂಗರಿಸಿದ್ದಾರೆ. ತನ್ನ ಮನೆಯನ್ನು ಸುಂದರವಾಗಿಡಲು ಜನ ಸಾಕಷ್ಟು ಕಸರತ್ತುಗಳನ್ನು ಮಾಡುತ್ತಾರೆ. ಕೋಟ್ಯಾಂತರ ರೂಪಾಯಿ ವ್ಯಯಿಸಿ ತನ್ನ ಮನೆಯನ್ನು ಇತರರಿಗಿಂತ ಭಿನ್ನವಾಗಿಡಲೂ ಪ್ರಯತ್ನಿಸುತ್ತಾರೆ. ಮನೆ ಅತ್ಯಂತ ಆಕರ್ಷಕವಾಗಿ ಕಾಣಲು ಅದಕ್ಕೆ ಬಳಿದಿರುವ ಬಣ್ಣಗಳೂ ಕಾರಣವಾಗುತ್ತದೆ.

ಇದೇ ಕಾರಣಕ್ಕಾಗಿ ಮಾರುಕಟ್ಟೆಯಲ್ಲಿ ಸಿಗುವ ವಿವಿಧ ಪ್ರಕಾರದ ಕೆಮಿಕಲ್ ಹಾಗೂ ಸಿಂಥೆಟಿಕ್ ಪೈಂಟ್‌ಗಳನ್ನು ಗೋಡೆಗಳಿಗೆ ಬಳಸಿಕೊಳ್ಳುತ್ತಾರೆ. ಆದರೆ ಪುತ್ತೂರು ತಾಲೂಕಿನ ಇರ್ದೆ ಗ್ರಾಮದ ಕುಟುಂಬವೊಂದು ಸ್ವದೇಶಿ ಗೋವಿನ ಸೆಗಣಿಯನ್ನೇ ಪೈಂಟ್ ಆಗಿ ಬಳಸಿದೆ.

## ಹೊಸ ಪ್ರಯೋಗ ಮಾಡಿದ ಡಾ. ಶಶಿಶೇಖರ್ ಭಟ್

ಸಗಣಿಗೆ ಕೆಲವು ಔಷಧೀಯ ಗಿಡಮೂಲಿಕೆಗಳನ್ನು ಬಳಸಿ ಸಿಂಥೆಟಿಕ್ ಪೈಂಟ್ ನಂತೆ ಗೋಡೆಗೆ ಅಂಟಿಕೊಳ್ಳುವಂತೆ ತಯಾರಿಸಿ ಮನೆಯ ಎಲ್ಲಾ ಕೋಣೆಗಳಿಗೂ ಬಳಿಯಲಾಗಿದೆ. ಇರ್ದೆಯ ಆಯುರ್ವೇದ ವೈದ್ಯರಾದ ಡಾ. ಶಶಿಶೇಖರ್ ಭಟ್ ಸೆಗಣಿಯನ್ನು ಬಳಸಿ ಈ ರೀತಿಯ ಹೊಸ ಪ್ರಯೋಗವನ್ನು ಮಾಡಿದ್ದು, ಸೆಗಣಿಯ ಈ ಪೈಂಟನ್ನು ವಿವಿಧ ಬಣ್ಣದಲ್ಲೂ ಸಿದ್ಧಪಡಿಸುವ ಯೋಜನೆಯನ್ನೂ ಇರಿಸಿಕೊಂಡಿದ್ದಾರೆ.

## ಸಗಣಿಯ ರೋಗ ನಿರೋಧಕ ಶಕ್ತಿ ಪರಿಣಾಮ ಬೀರಲಿ

ಅನಾದಿ ಕಾಲದಿಂದಲೂ ಸಗಣಿಯನ್ನು ಅತ್ಯಂತ ಪವಿತ್ರ ಹಾಗೂ ರೋಗ ನಿರೋಧಕ ಶಕ್ತಿಯುಳ್ಳ ವಸ್ತುವನ್ನಾಗಿ ಬಳಸಿಕೊಳ್ಳಲಾಗುತ್ತಿದ್ದು, ಹಿಂದಿನ ಕಾಲದಲ್ಲೂ ಸಗಣಿಯನ್ನು ಗೋಡೆಗಳಿಗೆ ಹಾಗೂ ನೆಲಕ್ಕೆ ಬಳಿಯುವಂತಹ ವ್ಯವಸ್ಥೆಗಳಿತ್ತು. ಆದರೆ ಇತ್ತೀಚಿನ ಆಧುನಿಕ ಯುಗದಲ್ಲಿ ಇದು ನೇಪಥ್ಯಕ್ಕೆ ಸರಿದ ಪರಿಣಾಮ ರಾಸಾಯನಿಕ ಮಿಶ್ರಿತ ಪೈಂಟ್‌ಗಳನ್ನು ಬಳಸಲು ಆರಂಭವಾಗಿದೆ. ಅಂದಹಾಗೆ ಮನೆ ಮಂದಿಯ ಆರೋಗ್ಯದ ಮೇಲೆ ಸಗಣಿಯ ರೋಗ ನಿರೋಧಕ ಶಕ್ತಿ ಪರಿಣಾಮ ಬೀರಲಿ ಎನ್ನುವುದು ಡಾ. ಶಶಿಶೇಖರ್ ಭಟ್ ಅವರ ಉದ್ದೇಶವಾಗಿದೆ.


## ಇಂಥ ಪೈಂಟ್ ಗಳು ಹೆಚ್ಚು ಮಾರುಕಟ್ಟೆಗೆ ಬರಲಿ

ರಾಸಾಯನಿಕ ಮಿಶ್ರಿತ ಸಿಂಥೆಟಿಕ್ ಪೈಂಟ್‌ಗಳಂತೆಯೇ ಸಗಣಿಯ ಪೈಂಟ್ ಅನ್ನು ಬಳಸಬಹುದಾಗಿದೆ. ಸಾಮಾನ್ಯವಾಗಿ ಎಲ್ಲಾ ಪೈಂಟ್ ಗಳನ್ನು ಗೋಡೆಗೆ ಎರಡು ಬಾರಿ ಬಳಿಯುವಂತೆ ಸಗಣಿಯ ಪೈಂಟನ್ನೂ ಎರಡು ಬಾರಿ ಬಳಿಯಬೇಕಾಗುತ್ತದೆ. ಅಲ್ಲದೇ, ಈ ಪೈಂಟ್ ವಾಟರ್ ಪ್ರೂಫ್ ಕೂಡ ಆಗಿದೆ. ರಾಸಾಯನಿಕ ಪೈಂಟ್‌ಗಳನ್ನು ಬಳಿಯುವಾಗ ಇರುವ ಕಣ್ಣುರಿತ, ತುರಿಕೆಯ ಲಕ್ಷಣಗಳು ಸೆಗಣಿಯಿಂದ ತಯಾರಿಸಿದ ಪೈಂಟ್‌ನಲ್ಲಿ ಇಲ್ಲದ ಕಾರಣ ಪೈಂಟರ್ ಗಳೂ ಇಂಥ ಪೈಂಟ್ ಗಳು ಹೆಚ್ಚೆಚ್ಚು ಮಾರುಕಟ್ಟೆಗೆ ಬರಬೇಕು ಎನ್ನುವ ಇಚ್ಛೆಯನ್ನೂ ವ್ಯಕ್ತಪಡಿಸುತ್ತಿದ್ದಾರೆ.

## ಮಾರುಕಟ್ಟೆಗೆ ಪ್ರವೇಶಿಸುವ ದಿನಗಳು ಹತ್ತಿರವಾಗಲಿದೆ

ಕೇವಲ ಸ್ವದೇಶಿ ತಳಿಯ ಗೋವಿನ ಸಗಣಿಯಿಂದ ಮಾತ್ರವೇ ಈ ಸೆಗಣಿ ಪೈಂಟ್ ತಯಾರಿಸಲು ಸಾಧ್ಯ. ಸಗಣಿಯನ್ನು ಕೇವಲ ಗೋಬರ್ ಗ್ಯಾಸ್ ಹಾಗೂ ಗೊಬ್ಬರಕ್ಕೆ ಬಳಸುತ್ತಿದ್ದ ಕಾಲ ಇನ್ನು ದೂರವಾಗಲಿದ್ದು, ಸಗಣಿಯ ಪೈಂಟ್ ಮಾರುಕಟ್ಟೆಗೆ ಪ್ರವೇಶಿಸುವ ದಿನಗಳು ಹತ್ತಿರವಾಗಲಿವೆ.

**ಕೃಪೆ: ಗೂಗಲ್**



MAXSURGE
MAXSURGE INVESTMENT ADVISERS
With Best Wishes
Offers Financial Planning and Investment Advises for Life Goals Like
1. Child Education
2. Retirement
3. Dream House
4. Vacation etc.

atme
ATME College of Engineering
for admissions call:+91-94482-85644
For more details and NBA accredited programs please visit www.atme.in

# ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು



ಕುವೆಂಪು ವೆಂಕಟಪ್ಪ ಪುಟ್ಟಪ್ಪ
ಶ್ರೀ ರಾಮಾಯಣ ದರ್ಶನಂ
೧೯೬೮



ದತ್ತಾತ್ರೇಯ ರಾಮಚಂದ್ರ ಬೇಂದ್ರೆ
ನಾಕುತಂತಿ
೧೯೭೩



ಶಿವರಾಮ ಕಾರಂತ
ಮೂಕಜ್ಜಿಯ ಕನಸುಗಳು
೧೯೭೭



ಮಾಸ್ತಿ ವೆಂಕಟೇಶ ಅಯ್ಯಂಗಾರ್
ಕನ್ನಡ ಸಾಹಿತ್ಯ
೧೯೮೩



ವಿನಾಯಕ ಕೃಷ್ಣ ಗೋಕಾಕ್
ಕನ್ನಡ ಸಾಹಿತ್ಯ
೧೯೯೦



ಡಾ. ಯು.ಆರ್. ಅನಂತಮೂರ್ತಿ
ಕನ್ನಡ ಸಾಹಿತ್ಯ
೧೯೯೪





ಡಾ. ಗಿರೀಶ್ ಕಾರ್ನಾಡ್
ಕನ್ನಡ ಸಾಹಿತ್ಯ
೧೯೯೮



ಡಾ. ಚಂದ್ರಶೇಖರ ಕಂಬಾರ
ಕನ್ನಡ ಸಾಹಿತ್ಯ
೨೦೧೦



## Editorial Desk



ನೆಲವೊಂದೆ ಹೊಲಗೇರಿ ಶಿವಾಲಯಕ್ಕೆ, ಜಲವೊಂದೆ ಶೌಚಾಚಮನಕ್ಕೆ,
ಕುಲವೊಂದೆ ತನ್ನತಾನರಿದವಂಗೆ, ಫಲವೊಂದೆ ಷಡುದರುಶನ ಮುಕ್ತಿಗೆ,
ನಿಲವೊಂದೆ ನಿಮ್ಮನರಿದವಂಗೆ ಕೂಡಲಸಂಗಮ ದೇವಾ



We welcome any suggestions at **mysoreshilpi19@gmail.com**